ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 : ದಿನಾಂಕ : 28–01–2020

## ವಿಶೇಷ ಪತ್ರಿಕಾ ಆಮಂತ್ರಣ

ಕಾರ್ಮಿಕ ಸಚಿವ ಶ್ರೀ ಎಸ್ ಸುರೇಶ್ ಕುಮಾರ್ ಅವರು ಜನವರಿ 29 ರಂದು ಬೆಳಿಗ್ಗೆ 10–00 ಗಂಟೆಗೆ ನಗರದ ಬನ್ನೇರುಘಟ್ಟ ರಸ್ತೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆವರಣದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಒಂದು–ದಿನದ ಶೃಂಗ ಸಭೆಯನ್ನು ಉದ್ಘಾಟಿಸಲಿದ್ದಾರೆ.

ಸರ್ಕಾರದ ಉನ್ನತಾಧಿಕಾರಿಗಳು, ಕಾರ್ಮಿಕ ಸಂಘಟನೆಗಳ ಮುಖಂಡರು ಹಾಗೂ ನಿರ್ಮಾಣ ಕ್ಷೇತ್ರದ ದಿಗ್ಗಜರು ಈ ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದೆ. ಮಾಧ್ಯಮ ವಾಹನವು ಅಂದು ಬೆಳಿಗ್ಗೆ 8–45 ಗಂಟೆಗೆ ನಗರದ ಭಗವಾನ್ ಮಹಾವೀರ ರಸ್ತೆಯಲ್ಲಿರುವ ವಾರ್ತಾ ಸೌಧದ ಆವರಣದಿಂದ ನಿಗದಿತ ಸ್ಥಳದತ್ತ ತೆರಳಲಿದೆ.

ವಿದ್ಯುನ್ಮಾನ ಹಾಗೂ ಮುದ್ರಣ ಮಾಧ್ಯಮವನ್ನು ಪ್ರತಿನಿಧಿಸುವ ಮಾಧ್ಯಮ ಪ್ರತಿನಿಧಿಗಳು ಪಾಲ್ಗೊಂಡು ಮಹತ್ವಯುತ ಈ ಕಾರ್ಯಕ್ರಮಕ್ಕೆ ವ್ಯಾಪಕ ಪ್ರಚಾರ ದೊರಕಿಸಿಕೊಡಲು ಕೋರಲಾಗಿದೆ.

ಡಿ. ಪಿ. ಮುರಳೀಧರ್<br>
ಉಪ ನಿರ್ದೇಶಕರು ( ವಾರ್ತೆ )

SPECIAL MEDIA INVITATION

The Minister for Labour Mr S Suresh Kumar will inaugurate a one-day Conclave on Construction Workers Safety, Health and Welfare on January 29 at 10-00 A M at the Indian Institute of Management Bangalore Campus on Bannerghatta Road.

Top Bureaucrats in the Government, Leaders of the Labour Organisations and Doyens in the Building Industry participate in this day-long conclave.

Vehicle arrangement has been made to take media persons to this function. The Media Vehicle, leaves at 8-45 A M from Vartha Soudha Premises on Bhagwan Mahaveer Road.

Media Persons, representing Electronic and Print Media, are requested to kindly attend and give wide coverage to this important function.

D P MURALIDHAR
DEPUTY DIRECTOR ( NEWS )

**ಪತ್ರಿಕಾ ಪ್ರಕಟಣೆ**

**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಒಂದು–ದಿನದ ಶೃಂಗ ಸಭೆ**

**ಬೆಂಗಳೂರು, ಜನವರಿ 28 ( ಕರ್ನಾಟಕ ವಾರ್ತೆ ) :**

ಕೇಂದ್ರ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ Building and Other Construction Workers (Regulation of Employment & Condition of Services) Act, 1996 ಅನ್ನು ಜಾರಿಗೆ ತಂದಿದ್ದು, ಕರ್ನಾಟಕ ಸರ್ಕಾರವು 2006 ರಲ್ಲಿ ಇದಕ್ಕೆ ಪೂರಕವಾದ ನಿಯಮಗಳನ್ನು ರೂಪಿಸಿರುತ್ತದೆ. ಸದರಿ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ಕಟ್ಟಡ ಕಾರ್ಮಿಕರ ಸುರಕ್ಷತೆ, ಆರೋಗ್ಯ, ಅಪಘಾತಗಳನ್ನು ತಡೆಗಟ್ಟುವ ಮತ್ತು ಕಟ್ಟಡ ಕಾರ್ಮಿಕರಿಗೆ ವಿವಿಧ ರೀತಿಯ ಕಲ್ಯಾಣ ಸೌಲಭ್ಯಗಳನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಒದಗಿಸುವ ಕುರಿತಂತೆ ಪ್ರಾವಧಾನಗಳು ಇರುತ್ತವೆ. ಸದರಿ ಕಾಯ್ದೆಯಂತೆ ನಿರ್ಮಾಣ ವೆಚ್ಚ 10 ಲಕ್ಷಕ್ಕಿಂತ ಮೇಲ್ಪಟ್ಟ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳು ಒಳಪಡುತ್ತದೆ.

ಸರ್ಕಾರವು ಸದರಿ ಕಾಯ್ದೆ ಮತ್ತು ನಿಯಮಗಳನ್ನು ಜಾರಿ ಮಾಡಲು 2007 ರಲ್ಲಿ ಕಾರ್ಮಿಕ ಇಲಾಖೆಗೆ ವಹಿಸಿರುತ್ತದೆ ಮತ್ತು ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ರಚಿಸಲಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಅಂದಾಜು ಒಟ್ಟು 21.62 ಲಕ್ಷ ಕಟ್ಟಡ ಕಾರ್ಮಿಕರಿದ್ದು, Building and Other Construction Workers Welfare Cess Rules 1998 ರಂತೆ ನಿಯಮಗಳನ್ನು 2007 ರಿಂದ ಪ್ರಾರಂಭಿಸಿ ಇಲ್ಲಿಯವರೆಗೆ ಸುಮಾರು ರೂ. 8500 ಕೋಟಿಗಿಂತ ಹೆಚ್ಚು ಸೆಸ್ ಮೊತ್ತವನ್ನು ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹಿಸಲಾಗಿದೆ ಹಾಗೂ 4.20 ಲಕ್ಷ ಕಟ್ಟಡ ಕಾರ್ಮಿಕರು ಮತ್ತು ಅವರ ಕುಟುಂಬ ವರ್ಗದವರನ್ನು ಫಲಾನುಭವಿಗಳೆಂದು ಗುರುತಿಸಿ ಸುಮಾರು ರೂ. 532.00 ಕೋಟಿಗಳಷ್ಟು ಮೊತ್ತವನ್ನು ಕಾರ್ಮಿಕರ ಕಲ್ಯಾಣ ಸೌಲಭ್ಯಗಳಿಗಾಗಿ ವಿನಿಯೋಗಿಸಲಾಗಿದೆ. ಕಾರ್ಮಿಕ ಇಲಾಖೆಯು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆ ಮತ್ತು ನಿಯಮಗಳನ್ವಯ ಕಟ್ಟಡ ಕಾಮಗಾರಿಗಳ ನೊಂದಣಿ, ಗುತ್ತಿಗೆದಾರರ ಲೈಸೆನ್ಸ್, ಸೆಸ್ ಸಂಗ್ರಹಣೆ ಹಾಗೂ ಇತರೆ ಪ್ರವಧಾನಗಳನ್ನು ಅನುಷ್ಠಾನಗೊಳಿಸುತ್ತಿದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ತೊಡಗಿರುವ ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯ ಸಂಬಂಧ ಅನುಷ್ಠಾನ ಕನಿಷ್ಟ ಮಟ್ಟದಲ್ಲಿದ್ದು ಕಾಯ್ದೆ ಮತ್ತು ನಿಯಮಗಳಲ್ಲಿರುವ ಉದ್ದೇಶಗಳನ್ನು ಈಡೇರಿಸಲು ಅನುಷ್ಠಾನ ವ್ಯವಸ್ಥೆಯಲ್ಲಿ ಗಣನೀಯವಾದ ಸುಧಾರಣೆ ಅಗತ್ಯವಾಗಿರುತ್ತದೆ. ಕರ್ನಾಟಕ ಸರ್ಕಾರವು ದಿನಾಂಕ: 11-02-2011 ರಂದು ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ರೂ 25 ಕೋಟಿಗಿಂತ ಅಧಿಕ ವೆಚ್ಚದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ತೊಡಗಿರುವ ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಪ್ರಾವಧಾನಗಳನ್ನು ಮಾತ್ರ ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ವಹಿಸಿರುತ್ತದೆ. ಇಲಾಖೆಯ ಅಧಿಕಾರಿಗಳು ಇದುವರೆವಿಗೂ 1254 ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಪರಿವೀಕ್ಷಣೆಗಳನ್ನು ಕೈಗೊಂಡು ಸುರಕ್ಷತೆ ಮತ್ತು ಆರೋಗ್ಯ ಕುರಿತು ಸಲಹೆ/ಸೂಚನೆಗಳನ್ನು ನೀಡಿರುತ್ತಾರೆ. ಅನುಸರಣೆ ಸಮರ್ಪಕವಾಗಿಲ್ಲದ ಮತ್ತು ಅಪಘಾತ ಪ್ರಕರಣಗಳಲ್ಲಿ ಮಾಲೀಕರ/ಗುತ್ತಿಗೆದಾರರ ವಿರುದ್ಧ ನ್ಯಾಯಾಲಯಗಳಲ್ಲಿ 75 ಮೊಕದ್ದಮೆಗಳನ್ನು ಹೂಡಲಾಗಿರುತ್ತದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿಯು ವಿವಿಧ ಸ್ಥಳೀಯ ಸಂಸ್ಥೆಗಳಾದ BBMP, BDA, KIADB, BMRDA, BIAPPA ಹಾಗೂ ಇತರೆ ಸ್ಥಳೀಯ ಸಂಸ್ಥೆಗಳು ಸೆಸ್ ಸಂಗ್ರಹಿಸುತ್ತಿವೆ. ಸದರಿ ಮಾಹಿತಿಯನ್ನು ಕಾರ್ಖಾನೆಗಳು,

ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯೊಂದಿಗೆ ಹಂಚಿಕೊಂಡು ಎಲ್ಲಾ ನಿರ್ಮಾಣ ಕಾಮಗಾರಿಗಳನ್ನು ತಲುಪುವ ಅಗತ್ಯವಿರುತ್ತದೆ. ಸದರಿ ಕಾಯ್ದೆಯ ಅನುಷ್ಠಾನದಲ್ಲಿ ಹಲವು ಅಡೆತಡೆಗಳಿಂದ ಕಟ್ಟಡ ಮತ್ತು ಇತರೆ ಕಾಮಗಾರಿಗಳಲ್ಲಿ ತೊಡಗಿರುವ ಕಾರ್ಮಿಕರ ಸುರಕ್ಷತಾ ಮತ್ತು ಆರೋಗ್ಯದ ಕಾನೂನುಗಳನ್ನು ಅನುಷ್ಠಾನಗೊಳಿಸುವ ವ್ಯವಸ್ಥೆ ನಿರೀಕ್ಷಿತ ಮಟ್ಟಕ್ಕೆ ಇರುವುದಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಸಾರ್ವಜನಿಕರಿಂದ, ಕಾರ್ಮಿಕ ಮುಖಂಡರುಗಳಿಂದ ಮತ್ತು ಸಂಘ ಸಂಸ್ಥೆಗಳಿಂದ ಆಗಿಂದಾಗ್ಗೆ ದೂರುಗಳು, ಸಲಹೆ/ಸೂಚನೆಗಳು ಬರುತ್ತಿದ್ದು ಹಾಗೂ ಕರ್ನಾಟಕ ರಾಜ್ಯ ಉಚಿತ ಕಾನೂನು ಸೇವಾ ಪ್ರಾಧಿಕಾರವು ಸಹ ಸದರಿ ಕಾನುನುಗಳ ಅನುಷ್ಠಾನದ ಕುರಿತಂತೆ ಸರ್ಕಾರದ ಗಮನ ಸೆಳೆದಿರುತ್ತದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ತೊಡಗಿರುವ ಕಾರ್ಮಿಕರ ಸುರಕ್ಷತೆ ಆರೋಗ್ಯ ಮತ್ತು ಕಲ್ಯಾಣ ವ್ಯವಸ್ಥೆಯನ್ನು ಉತ್ತಮಪಡಿಸಿ ಗಣನೀಯವಾಗಿ ಸುಧಾರಿಸುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಮುಂದುವರೆದಂತೆ ಕಟ್ಟಡ ಕಾಮಗಾರಿ ಚಟುವಟಿಕೆಗಳಲ್ಲಿ ನಿರತರಾಗಿರುವ ಕಟ್ಟಡ ಕಾರ್ಮಿಕರ ಸರ್ವಾಂಗೀಣ ಅಭಿವೃದ್ಧಿ ಸಾಧಿಸಿ ಸದರಿ ಕಾರ್ಮಿಕರ ಜೀವನ ಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಕ್ರಮ ವಹಿಸುವುದು ಸಂಬಂಧಿಸಿದ ಎಲ್ಲಾ ಇಲಾಖೆಗಳ ಮತ್ತು ಭಾಗೀದಾರರ ಗುರುತರ ಜವಾಬ್ದಾರಿಯಾಗಿರುತ್ತದೆ.

ಮಾನ್ಯ ಕಾರ್ಮಿಕ ಸಚಿವ ಶ್ರೀ ಎಸ್. ಸುರೇಶ್‌ಕುಮಾರ್ ರವರು ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಮಾನದಂಡಗಳನ್ನು ಪರಿಣಾಮಕಾರಿಯಾಗಿ ಉತ್ತಮಪಡಿಸುವ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಬದ್ದತೆಯನ್ನು ತೋರಿಸಬೇಕಾಗಿದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಇದಕ್ಕೆ ಅನುಗುಣವಾಗಿ ನಿರ್ಮಾಣ ಕಾರ್ಯಚಟುವಟಿಕೆಗಳಲ್ಲಿ ತೊಡಗಿರುವ ಎಲ್ಲಾ ಭಾಗೀದಾರರು ಅಂದರೆ, ಡೆವಲಪರ್ಸ್, ನಿರ್ಮಾಣ ಸಂಸ್ಥೆಗಳು, ಗುತ್ತಿಗೆದಾರರು, ಕಾರ್ಮಿಕ ಸಂಘಟನೆಗಳು, ವಿವಿಧ ಸರ್ಕಾರಿ ಇಲಾಖೆಗಳು, ಕ್ಷೇತ್ರದಲ್ಲಿನ ಪರಿಣಿತರು ಮುಂತಾದ ಎಲ್ಲಾ ಭಾಗೀದಾರರೊಂದಿಗೆ ಮುಕ್ತವಾದ ಸಂವಾದವನ್ನು ನಡೆಸಲು ಮತ್ತು ಅನುಷ್ಠಾನ ವ್ಯವಸ್ಥೆಯನ್ನು ಉತ್ತಮಪಡಿಸಲು ಅಗತ್ಯ ಸಲಹೆ ಸೂಚನೆಗಳನ್ನು ಪಡೆಯಲು ಅನುವಾಗುವಂತೆ ಬೆಂಗಳೂರಿನ ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬೆಂಗಳೂರು ಇವರ ಸಹಯೋಗದೊಂದಿಗೆ ಈ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಶ್ರೀ ಶ್ರೀಧರ್ ಪಬ್ಬಿಶೆಟ್ಟಿ ಮುಖ್ಯಸ್ಥರು, ಸೆಂಟರ್ ಫಾರ್ ಇನ್‌ಕ್ಲೂಸೀವ್ ಗವರ್ನೆನ್ಸ್ ಅವರು ಈ ಕಾರ್ಯಾಗಾರದ ಸಂಯೋಜಕರಾಗಿರುತ್ತಾರೆ.

**<u>ಕಾರ್ಯಾಗಾರದಲ್ಲಿ ಚರ್ಚಿಸಲಿರುವ ವಿಷಯಗಳು :</u>**

1. ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಭಾಗೀದಾರರು ಕಟ್ಟಡ ಕಾರ್ಮಿಕರ ಸುರಕ್ಷತೆಯನ್ನು ಜವಾಬ್ದಾರಿಯಾಗಿ ಪರಿಗಣಿಸಿ ಸಂಘಟಿತವಾಗಿ ಕ್ರಮವಹಿಸುವುದು.
2. ಅನುಷ್ಠಾನ ವ್ಯವಸ್ಥೆಯನ್ನು ಉತ್ತಮಪಡಿಸಲು ಅಗತ್ಯ ಸಿಬ್ಬಂದಿಗಳನ್ನು ನೇಮಿಸಿ ತರಬೇತಿ ನೀಡುವುದು.
3. ಕಟ್ಟಡ ಕಾರ್ಮಿಕರ ಸುರಕ್ಷತೆಯನ್ನು ಉತ್ತಮಪಡಿಸಲು ಇರುವ ಉತ್ತಮ ಪರಿಕ್ರಮಗಳನ್ನು (Best Practices) ವಿವಿಧ ಇಲಾಖೆಗಳು / ಭಾಗೀದಾರರು ಪರಸ್ಪರ ವಿನಿಮಯ ಮಾಡಿಕೊಳ್ಳುವುದು.
4. ಕಟ್ಟಡ ಕಾರ್ಮಿಕರಿಗೆ ಕಾಮಗಾರಿ ಸ್ಥಳಗಳಲ್ಲಿ ಸುರಕ್ಷತೆ ಕುರಿತು ಅರಿವು ಮೂಡಿಸುವುದು ಮತ್ತು ಸುರಕ್ಷತೆಯ ಮಾನದಂಡಗಳನ್ನು ಪರಿಪಾಲಿಸುತ್ತಿರುವ ಬಗ್ಗೆ ಖಾತರಿಪಡಿಸುವುದು.
5. ನಿರ್ಮಾಣ ಕಾಮಗಾರಿಗಳಲ್ಲಿ ಅಪಘಾತಗಳು ಸಂಭವಿಸದಂತೆ ಎಲ್ಲಾ ಇಲಾಖೆಗಳು / ಭಾಗೀದಾರರು ಸಂಘಟಿತ ಅನುಷ್ಠಾನ ವ್ಯವಸ್ಥೆಯನ್ನು ರೂಪಿಸುವುದು.
6. ಕಾರ್ಯಾಗಾರದಲ್ಲಿ ಹೊರಬರುವ ಅನುಷ್ಠಾನಗೊಳಿಸಬಹುದಾದ ಉತ್ತಮ ಅಂಶಗಳನ್ನು ಕಾರ್ಯರೂಪಕ್ಕೆ ತರಲು ಶ್ರಮವಹಿಸುವುದು.
7. ಸನ್ಮಾನ್ಯ ಕಾರ್ಮಿಕರ ಸಚಿವರ ಅಧ್ಯಕ್ಷತೆಯಲ್ಲಿ ಮೇಲಿನ ಎಲ್ಲಾ ಅಂಶಗಳ ಅನುಷ್ಠಾನ ಕುರಿತಂತೆ ಪ್ರಗತಿಯನ್ನು ನಿಯತಕಾಲಿಕವಾಗಿ ಪರಿಶೀಲಿಸಿ ಸಕಾರಾತ್ಮಕ ಅಭಿವೃದ್ಧಿ ಹೊಂದಲು ಕ್ರಮವಹಿಸುವುದು.

**********

## <u>PRESS RELEASE</u>

# CONCLAVE ON CONSTRUCTION WORKERS SAFETY, HEALTH AND WELFARE

BENGALURU, JANUARY 28 ( KARNATAKA INFORMATION ) :

It was estimated in 1996 that around 8.5 million workers were engaged in building and other construction works in India. Now this number estimated to be 20 million. Building and other construction workers continue to be one of the most vulnerable segments of the unorganized labour in India.

To ensure better working conditions and safety of these construction workers, the Government of India passed the Act viz., Building and other Construction Workers(Regulation of Employment and Conditions of Service) act, 1996. The Government of Karnataka has brought in comprehensive Karnataka Rules in 2006. The Act and Rules envisages the requirement of safety, health and welfare of the construction workers, collection of cess and other administration issues. Of these provisions, cess collection began in 2006 and about Rs. 8000 crores have been collected so far and the expenditure towards various welfare schemes has been Rs. 532.6 crores benefitting 4.20 lakh construction workers and their family members against 21.62 lakh registered construction workers. It is widely known that the safety at construction site is lacking attention across the States and ability of enforcing the provisions outlined in BOCW Act and Rules is very limited due to poor enforcement mechanism.

On 11-02-2011, the Government of Karnataka entrusted the responsibility of overseeing the safety and health provisions of the said Act and Rules to the Department of Factories, Boilers, Industrial safety and Health at the project site, wherein the project cost excluding cost of land is more than 25 crores. The department of FBISH has so far conducted 1172 inspections of the construction sites to verify and guide on the issues relating to health and safety of construction sites to verify and guide on the issues relating to health and safety of construction workers at worksite. It has taken up 67 prosecutions against the erring employers. The skill set required to ensure safety at construction site for the workers requires in-depth understanding of civil engineering. Further safety and

health of construction workers at construction sites of project cost below 25 crore is a neglected area and require immediate attention.

The cess collection is the responsibility of various local authorities like, BBMP, KIADB, Labour department, Urban and Local bodies, data sharing on construction projects between these authorities and the Department of Factories, Boilers, Industrial safety and Health needs to be established to ensure 100% percent identification of all construction projects and the construction workers.

The Minister for Labour Mr S. Suresh Kumar is desirous of significantly improving the working standards of the construction workers. In this regard, a round table discussion with the different stake holders has been proposed with a view of indentifying the shortfalls in the implementation mechanism and to guide through the way forward.

Centre for public Policy at IIM Bangalore has volunteered to host the round table conclave at IIM Bangalore and explore options. Sri Sridhar Pabbesetty, Chief Enabler, Centre for inclusive Governance is the co-coordinator for the conclave.

Desired Outcomes :

1. Establish synergy amongst various stakeholders and make safety of construction workers a shared responsibility.

2. Indentifying the gaps in enforcing the constitutional obligations for safety of construction workers and providing the requisite qualified manpower and training.

3. Ensuing that the best practices are shared between different department/agencies.

4.Ensuring that every construction workers is aware of the safety requirements/standards stipulated at construction site.

5. Design and provide the mechanism where the various government agencies at in a co-ordinated manner continuously to prevent incidents at construction sites and enforce corrective measures wherever required. The state government

should provide adequate political will and human resources required to realise these objectives.

6. An implementation roadmap to take forward the round table deliberations and ensure widespread discussion amongst all the stake holders within a month of the round table.

7. A detailed roadmap with roles and responsibility to each stakeholders to be developed and monitored continuously under the leadership of the hon'ble Labour Minister, GOK for sustainable improvement.

Stake holders

1. Builders and Developers

2.Contractors

3. Trade Union Leaders

4.Labour Department

5. Department of Factories, Boilers, Industrial Safety and Health

6. BDA/BMRDA

7. Public Works Department

8. BBMP

9.Fire and Emergency Services

10. Karnataka State Pollution Control Board

11. Researchers and Academicians working on the issues of construction workers

12. Karnataka State Legal Services Authority

13. Legal Exerts working on the issues of construction workers

14. Building and Other Construction Workers Welfare Board

15. Civil Engineering faculties/Architects/Structural Engineering experts

16. Retired Government officials involved in construction safety.

**********